

### ಜಿಪುಣತನ

ಒಬ್ಬ ಜಿಪುಣ ದುಡ್ಡು ಉಳಿಸಲು, ತನ್ನ ಮನೆಯ ರಿಪೇರಿ ತಾನೆ ಮಾಡ್ತಿರ್ತಾನೆ. ಕಾಲು ಜಾರಿ ಮೂರನೇ ಮಹಡಿಯಿಂದ ಬೀಳ್ತಾ ಇರುವಾಗ ತನ್ನ ಹೆಂಡತಿ ಅಡುಗೆ ಮಾಡ್ತಿರೋದು ಕಿಟಕಿಯಿಂದ ಕಾಣುತ್ತೆ. ಅಲ್ಲಿಂದಲೇ ಕೂಗಿ ಹೇಳ್ತಾನೆ. 'ಲೇ, ಇವತ್ತು ನನ್ನ ಪಾಲಿನ ಅಡುಗೆ ಮಾಡಬೇಡ'!

★★★

### ಸೊನ್ನೆ ದಂಡ, ಯಾಕೆ?

ನಾಲ್ವರು ಹುಡುಗಿಯರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಟಿಕೆಟ್ ತಪಾಸಣೆ ಮಾಡಿದ ಅಧಿಕಾರಿ ಚೂಡಿದಾರ್ ಧರಿಸಿದ ಹುಡುಗಿಗೆ ನೂರು ರೂಪಾಯಿ, ಸ್ಕರ್ಟ್ ಹಾಕಿದ ಹುಡುಗಿಗೆ ಐವತ್ತು ರೂಪಾಯಿ, ಮಿನಿ ಸ್ಕರ್ಟ್ ಹಾಕಿದ ಹುಡುಗಿಗೆ ಇಪ್ಪತ್ತೈದು ರೂಪಾಯಿ ದಂಡ ಹಾಕಿದರು. ಇನ್ನೊಬ್ಬ ಹುಡುಗಿಗೆ ಏನೂ ದಂಡ ಹಾಕಲಿಲ್ಲ. ಯಾಕೆ?

ಯಾಕೆಂದ್ರೆ ಅವಳ ಹತ್ರ ಟಿಕೆಟ್ ಇತ್ತು!

★★★

### ನಮ್ ಕಾಲ್ದಲ್ಲಿ

ಅಪ್ಪ: ನಮ್ ಕಾಲ ಹೇಗಿತ್ತು ಗೊತ್ತಾ? ನಾನು ಹತ್ತು ರೂಪಾಯಿ ತಗೊಂಡು ಅಂಗಡಿಗೆ ಹೋಗಿ, ಹಾಲು, ತರಕಾರಿ, ದಿನಸಿ ಎಲ್ಲಾ ತರ್ತಿದ್ದೆ.

ಮಗ: ಈಗ ಆಗಲ್ಲಪ್ಪಾ, ಎಲ್ಲಾ ಕಡೆ ಸಿ ಸಿ ಟಿವಿ ಹಾಕಿರ್ತಾರೆ!

(ಸಂಗ್ರಹ): **ಕೆ.ಪಿ.ಸತ್ಯನಾರಾಯಣ, ಹಾಸನ**

ಗೃಹಿಣಿ: ಡಾಕ್ಟ್ರೇ ನಮ್ಮೆಜಮಾನರಿಗೆ ಮರೆವು ವಿಪರೀತ ಜಾಸ್ತಿಯಾಗಿದೆ. ಪದೇ ಪದೇ ಬಾಚಣಿಗೆಯಿಂದ ತಲೆ ಬಾಚಿಕೊಳ್ತಾ ಇರ್ತಾರೆ.

ವೈದ್ಯ: ಅದರಿಂದಾಗುವ ತೊಂದರೆ ಏನು ಮೇಡಂ? ಬಾಚಿಕೊಳ್ಳಲಿ ಬಿಡಿ.

ಗೃಹಿಣಿ: ತೊಂದರೆ ಏನೂ ಇಲ್ಲ ಡಾಕ್ಟ್ರೇ! ಆದರೆ ಅವರ ತಲೆಯಲ್ಲಿ ಒಂದೇ ಒಂದು ಕೂದಲೂ ಇಲ್ಲವಲ್ಲ.

★★★

ಗುಂಡ: ರೀ ಕಂಡಕ್ಟರ್, ಏನ್ರೀ ನೀವು ಚಿಲ್ಲರೆ ಕೊಡದೆ ಹಾಗೇ ಬಂದು ಬಿಟ್ಟಿದ್ದೀರಿ? ನಾನು ಈಗ 40 ರೂಪಾಯಿ ಖರ್ಚು ಮಾಡಿಕೊಂಡು ಆಟೋದಲ್ಲಿ ಬಂದೆ ಗೊತ್ತಾ?

ಕಂಡಕ್ಟರ್: ಸಾರಿ ಸಾರ್! ಮರೆತುಬಿಟ್ಟೆ. ಅಂದ ಹಾಗೆ ನಾನು ನಿಮಗೆ ಚಿಲ್ಲರೆ ಎಷ್ಟು ಕೊಡಬೇಕು?

ಗುಂಡ: ಒಂದು ರೂಪಾಯಿ.

★★★

ಹೆಂಡತಿ: ರೀ ನೋಡಿದಿರಾ! ನಮ್ಮ ಮಗಳನ್ನು ಪೋಲಿ ಹುಡುಗರು ಹೆಸರು ಹಿಡಿದು ಕೂಗಿ ಚುಡಾಯಿಸುತ್ತಾರಂತೆ! ಈಗ ಏನು ಮಾಡೋದು?

ಗುಂಡ: ಅದಕ್ಯಾಕೆ ಅಷ್ಟೊಂದು ಚಿಂತೆ ಮಾಡುತ್ತೀಯಾ? ಅವಳ ಹೆಸರನ್ನು 'ಅಕ್ಕಾ' ಅಂತ ಬದಲಾಯಿಸಿದರಾಯಿತು ಬಿಡು.

(ಸಂಗ್ರಹ): **ಎಂ.ಕೆ.ಮಂಜುನಾಥ್, ಬೆಂಗಳೂರು**

